ಶ್ರೀ ಟಿ. ಚನ್ನಯ್ಯ.—ಈ ಗ್ರಾಮಕ್ಕೆ ಬಹು ದೂರ ಆಸ್ಪತ್ರೆ ಇದೆ ಎಂಬುದು ಗೊತ್ತಿದೆ. ರೋಗಿಗಳು ಬಹಳ ದೂರ ಹೋಗಿ ಔಷಧಿ ತೆಗೆದುಕೊಳ್ಳಬೇಕಾಗಿದೆ ಎಂದು ಸರ್ಕಾರದ ಗಮನದಲ್ಲಿದೆ.

ಶ್ರೀ ಬಿ. ಎಚ್. ರಾಮೇಗೌಡ.—ಅವಶ್ಯಕವಿಲ್ಲ ಎಂದು ಹೇಳಿದ್ದೀರಿ. ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಈ ಗ್ರಾಮದಲ್ಲಿ ಆಸ್ಪತ್ರೆಯನ್ನು design ಪ್ರಕಾರ ಕಟ್ಟಿಸಿಕೊಡುತ್ತೇವೆ ಎಂದು ಗ್ರಾಮಸ್ಥರು ಹೇಳಿದರು. ಆದರ ಪ್ರಕಾರ ಇನ್ನೂ ಕಟ್ಟಿಸಿಲ್ಲ. ಮುಂದೆ ಆಸ್ಪತ್ರೆ ನಡೆಸಬೇಕಾದರೆ ಡಿಸ್ಟ್ರಿಕ್ಟ್ ಬೋರ್ಡಿನವರು maintenance charge ಕೊಡಬೇಕು. ಅವರು ಕೊಡಬೇಕಾದ quota ಕೊಡುವುದಕ್ಕೆ ಇನ್ನೂ ಅವರ ಒಪ್ಪಿಗೆಯನ್ನು ಸರ್ಕಾರಕ್ಕೆ ತಿಳಿಸಿಲ್ಲ. ಅದಕ್ಕೋಸ್ಕರ ನಿಧಾನವಾಗಿದೆ.

ಶ್ರೀ ಬಿ. ಎಚ್. ರಾಮೇಗೌಡ.—ಕಟ್ಟಡವನ್ನು design ಪ್ರಕಾರ ಕಟ್ಟಿಸಿಕೊಟ್ಟರೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—Local Fund Dispensaryಗೆ ಒಂದು Type design ಇದೆ. ಅದರ ಪ್ರಕಾರ ಕಟ್ಟಬೇಕು. ಅಲ್ಲದೆ ಅಲ್ಲಿ Doctors, Compounders, ಮತ್ತು staff ಅವರೆಲ್ಲರಿಗೂ quarters ಕಟ್ಟಿಸಿಕೊಡಬೇಕು. ಅಷ್ಟು ಕೆಲಸ ಮಾಡಿದರೆ ಜಾಗ್ರತೆಯಾಗಿ ಸರ್ಕಾರದವರು ಆಸ್ಪತ್ರೆಯನ್ನು ಮಂಜೂರು ಮಾಡುವುದಕ್ಕೆ ಏರ್ಪಾಡು ಮಾಡುತ್ತಾರೆ.

ಶ್ರೀ ಮುದ್ದುರಾಮಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು ಅವರು ಕೊಡಬೇಕಾದ quota ಕೊಡುತ್ತೇವೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅವರು ಕೊಡತಕ್ಕ quota ವನ್ನು ಕೊಡಲು ಸರ್ಕಾರಕ್ಕೆ ಒಪ್ಪಿಗೆ ಕೊಟ್ಟಿಲ್ಲ. ಅದಕ್ಕೋಸ್ಕರ ನಿಧಾನವಾಗಿದೆ.

ಶ್ರೀ ಮುದ್ದುರಾಮಯ್ಯ.—ಈಗಾಗಲೇ ಗ್ರಾಮಸ್ಥರು ಕಟ್ಟಡ ಕಟ್ಟಿ ಪೂರೈಸಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಕಟ್ಟಡ ಕಟ್ಟಿಸಿದ್ದಾರೆ. ಆದರೆ ಈಗ ಆ ಆಸ್ಪತ್ರೆ type design ಪ್ರಕಾರ ಇಲ್ಲ, ಅದನ್ನು modify ಮಾಡಿ ಬೇರೆ ರೀತಿಯಲ್ಲಿ ಕಟ್ಟಿಸಿಕೊಡಬೇಕು ಮತ್ತು quarters ಕಟ್ಟಿಸಿಕೊಡಬೇಕು ಎಂದು ಕೇಳಿದ್ದೇವೆ. ಇನ್ನೂ modifications ಮಾಡಿಲ್ಲ, ಮತ್ತು quarters ಕಟ್ಟಿಲ್ಲ. ಅದಕ್ಕೋಸ್ಕರ ನಿಧಾನವಾಗಿದೆ.

ಶ್ರೀ ಮುದ್ದುರಾಮಯ್ಯ.— ಆಸ್ಪತ್ರೆಯನ್ನು ಮಂಜೂರು ಮಾಡುವಾಗ ಸರ್ಕಾರೀ ಡಾಕ್ಟರುಗಳಿಗೆ ಮತ್ತು ಇತರರಿಗೆ ಕಟ್ಟಡವನ್ನು ಕಡ್ಡಾಯವಾಗಿ ಕೊಡಬೇಕೆಂದು ನಿಬಂಧನೆ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಗ್ರಾಮಾಂತರಗಳಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೆ, ನರ್ಸ್‌ಗಳಿಗೆ, ಕಾಂಪೌಂಡರುಗಳಿಗೆ ಕಟ್ಟಡ ಕಟ್ಟಿಕೊಡದೇ ಹೋದ ಪಕ್ಷದಲ್ಲಿ ಅಲ್ಲಿ ವಾಸ ಮಾಡುವುದಕ್ಕೆ ಮನೆ ಇಲ್ಲವೆಂದು ಯಾರೂ ಹೋಗುವುದಿಲ್ಲ. ಅದಕ್ಕೋಸ್ಕರ ಗ್ರಾಮಾಂತರಗಳಲ್ಲಿ ಆಸ್ಪತ್ರೆ open ಮಾಡುವ ಕಾಲದಲ್ಲಿ ಕಟ್ಟಡಗಳಿದ್ದರೆ ಅಲ್ಲಿಗೆ ಕಳುಹಿಸಿದ್ದಂಥ staff ಅಲ್ಲಿಯೇ ಇದ್ದುಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಸರ್ಕಾರದವರು ಅಲ್ಲ staff quarters ಕಟ್ಟಿಸಿಕೊಡಬೇಕು ಎಂಬ ನಿಬಂಧನೆ ಮಾಡಿದ್ದು.

ಶ್ರೀ ಮುದ್ದುರಾಮಯ್ಯ.—ಗ್ರಾಮಸ್ಥರು ಅವರುಗಳಿಗೆ ಯೋಗ್ಯವಾದ ಮನೆಗಳನ್ನು ಕೊಡುತ್ತಾರೆಂದು ಮುಚ್ಚಳಿಕೆ ಬರೆದು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಕಟ್ಟಿಸಿಕೊಟ್ಟಿಲ್ಲ.

ಶ್ರೀ ಮುದ್ದುರಾಮಯ್ಯ.—ಗ್ರಾಮಸ್ಥರು ಅವರುಗಳಿಗೆ ಯೋಗ್ಯವಾದ ಮನೆಗಳನ್ನು ಕೊಡುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ತುಮಕೂರು ಜಿಲ್ಲೆಯ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಅಲ್ಲಿಗೆ ಹೋಗಿ ವಿಚಾರ ಮಾಡಿ ತಿಳಿದುಕೊಂಡು ಬಂದಿದ್ದಾರೆ. ಯಾರೂ ಕೂಡ ಕಟ್ಟಡ ಕೊಡುತ್ತೇವೆಂದು ತಮ್ಮ ಒಪ್ಪಿಗೆ ಕೊಟ್ಟಿಲ್ಲವೆಂಬ ರಿಪೋರ್ಟ್ ಬಂದಿದೆ.

ಶ್ರೀ ಮುದ್ದುರಾಮಯ್ಯ.—ಪಾನಕ್ಕೆ ಮನೆಗಳನ್ನು ಕೊಡುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆಂದು ಹೇಳಿದಮೇಲೆ, ಒಪ್ಪಿಗೆಕೊಟ್ಟಿಲ್ಲವೆಂದರೆ ಹೇಗೆ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಕೊಡುತ್ತೇವೆಂದು ಮುಂದೆಬಂದಿಲ್ಲ; ಅದರಿಂದ ನಿಧಾನವಾಗಿದೆ.

Mr. SPEAKER.—Questions 42 and 329 may be taken up together.

Afforestation.

Q.—42. Sri B. MADHAVACHAR (Bhadravati).—

Will the Government be pleased to state :—

(*a*) the extent of land taken up for afforestation in the State for the last three years ;

(*b*) the percentage of seedlings planted which have survived ?

A.—Dr. R. NAGAN GOWDA (Minister for Agriculture).—

(*a*) 1954-55	...	3,811	acres
1953-54	...	2,945	,,
1952-53	...	2,506½	,,
Total	...	9,262½	,,

(*b*) On an average about 60%.

Q.—329. Sri B. RACHIAH (Yelandur—Scheduled Castes).—

Will the Government be pleased to state :—

(*a*) the total amount provided for the afforestation of forest for the last three years ;

(*b*) the area afforested for the last three years ;

(*c*) the number of acres in which sandal trees are planted ;

(*d*) whether all the amount has been fully utilised in each year ?

A.—Dr. R. NAGAN GOWDA (Minister for Agriculture).—

(*a*) *V. Sowing and Planting*

	Rs.
1952-53 ...	2,00,000
1953-54 ...	2,00,735
1954-55 ...	2,25,720

Development Schemes.

Rs.
0·93 Lakhs
0·89 ,,
1·06 ,,

(*b*)

V. Sowing (*Acres*)	*Development Schemes* (*Acres*)	*Teak Plantations* (*Acres*)	*Total Acres*
	1952-53		
1321	452	733½	2,506½
	1953-54		
1534	679	732	2,945
	1954-55		
1873	1,096	842	3,811

(*c*) Sandal seeds are dibbled and not planted. About 5,350 acres for the last three years.

(*d*) During 1952-53, 1953-54 and 1954-55 under Development Schemes, most of the amounts provided have been used up.

ಶ್ರೀ ಬಿ. ಮಾಧವಾಚಾರ್.—ಅರಣ್ಯಗಳನ್ನು ಬೆಳೆಸುವ ಕಾರ್ಯವನ್ನು ಇನ್ನೂ ಜಾಸ್ತಿ ಮಾಡಬೇಕಾದ ಅವಶ್ಯಕತೆ ಸರ್ಕಾರಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಬಂದಿದೆ.

ಶ್ರೀ ಬಿ. ಮಾಧವಾಚಾರ್.—ಹೊನ್ನೆಮರದ ಮತ್ತು ಭದ್ರಾ ಜಲಾಶಯಗಳ ನಂಬಂಧವಾಗಿ ಮುಳುಗಡೆಗೆ ಬರತಕ್ಕ ಅರಣ್ಯದ ವಿಸ್ತೀರ್ಣವೆಷ್ಟು ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಪ್ರತಿವರ್ಷವೂ ಕೊಡತಕ್ಕ ಬಡ್ಡೆಟ್ ಹಣಕ್ಕೆ ನರಿಹೋಗುವ ರೀತಿಯಲ್ಲಿ ಖರ್ಚನ್ನು ಕಡಮೆ ಮಾಡುತ್ತಿದ್ದೀರಿ ; ಇದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಇಲ್ಲ, ಬಹಳ ಕಡಮೆಯಾಗಿಲ್ಲ. ಸ್ವಲ್ಪ ಮಾತ್ರ ವ್ಯತ್ಯಾಸವಾಗಿದೆ. 1954-55ಕ್ಕೂ 1952-53ಕ್ಕೂ ವ್ಯತ್ಯಾಸ ಅಷ್ಟೇನೂ ಇಲ್ಲ. ಈಗ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಅರಣ್ಯಗಳಿಗಾಗಿ 84 ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದಿದೆ.

ಶ್ರೀ ಬಿ. ರಾಚಯ್ಯ.—ಪ್ರತಿ ವರ್ಷವೂ ಇಷ್ಟು ಎಕರೆ ಅರಣ್ಯಗಳಲ್ಲಿ ಗಿಡಗಳನ್ನು ಹಾಕಬೇಕೆಂದು ಏನಾದರೂ ಅಭಿವೃದ್ಧಿ ಕಾರ್ಯಕ್ರಮವನ್ನಿಟ್ಟುಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಇಟ್ಟುಕೊಂಡಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ 86 ಸಾವಿರ ಎಕರೆ of forest ಮಾಡಬೇಕೆಂದಿಟ್ಟುಕೊಂಡಿದ್ದೇವೆ.

ಶ್ರೀ ಬಿ. ರಾಚಯ್ಯ.—ಈಗ 'ಕೂಪ್' ಗಳನ್ನು ಕೊಡುತ್ತಿದ್ದೀರಿ, ಆ ಸ್ಥಳಗಳಲ್ಲಿರತಕ್ಕ ಮರಗಳನ್ನು ಕಡಿದ ಮೇಲೆ ಅಲ್ಲಿ ಹೊಸದಾಗಿ ಮರಗಳನ್ನು ನೆಡುವ ಪ್ರಯತ್ನ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಕೂಪ್‌ಗಳನ್ನು ಕಡಿದ ಮೇಲೆ ಅಲ್ಲಿ ಅದೇ ಗಿಡಗಳನ್ನು ಬೆಳೆಸಬೇಕೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ರಾಚಯ್ಯ.—ಗಂಧದ ಮರಗಳನ್ನು ಬೆಳೆಸುವ ನಂಬಂಧವಾಗಿ dibble ಮಾಡಿದ್ದೇವೆ, plant ಮಾಡಿಲ್ಲವೆಂದು ಹೇಳಿದ್ದಾರೆ. ಶಿವಮೊಗ್ಗದ ಲಕ್ಕವಳ್ಳಿ ಪ್ಯಾಜೆಕ್ಟಿನ ಪ್ರದೇಶದಲ್ಲಿ plant ಮಾಡುವ ಪ್ರಯತ್ನ ಯಶಸ್ವಿಯಾಗಿದೆ ಎಂಬುದು ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈಗ ಎಲ್ಲಕಡೆಗಳಲ್ಲಿಯೂ dibble ಮಾಡುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ಲಕ್ಕವಳ್ಳಿ ಡಿವಿಜನ್ನಿನಲ್ಲಿ ಕಡಿದ ಮರಗಳ ಜಾಗದಲ್ಲಿ ಸಸಿಗಳನ್ನು ಏಳಿಸಿ ಅವುಗಳನ್ನು ನೆಡುತ್ತಿರುವುದು ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಶಿವಮೊಗ್ಗದಲ್ಲಿ dibble ಮಾಡುತ್ತಿದ್ದೇವೆ, ಚೆನ್ನಾಗಿ ಬರುತ್ತಿದೆ.

ಶ್ರೀ ಬಿ. ರಾಚಯ್ಯ.—ಹಾಗಲ್ಲ, ಬೀಜಗಳನ್ನು ಬೆಲ್ಲಿ ಸಸಿಗಳನ್ನು ಬೆಳೆಸಿ ಆ ಸಸಿಗಳನ್ನು ಕ್ರಮವಾಗಿ ನೆಟ್ಟು ಬೆಳೆಸುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಬೀಜಗಳನ್ನು ನೆಡುವುದಲ್ಲ ; ನರ್ಸರಿ ಮಾಡಿ ಆಮೇಲೆ ಸಸಿಗಳನ್ನು ನೆಡುವುದು.

ಡಾ॥ ಆರ್. ನಾಗನಗೌಡ.—ನನಗೆ ತಿಳಿದಮಟ್ಟಿಗೆ seeds dibble ಮಾಡಿ ನೆಡುತ್ತೇವೆಂದು ಅರಣ್ಯ ಇಲಾಖೆಯವರು ಹೇಳುತ್ತಿದ್ದಾರೆ. ಏಕೆಂದರೆ, ಇದು parasite, ಎಂದರೆ ಪರೋಪಜೀವಿ, ಆದಕಾರಣ ಬೇರೆ ಗಿಡ ಇರುವ ಕಡೆಯಲ್ಲಿ ಈ ಗಂಧದ ಬೀಜವನ್ನು ಹಾಕುತ್ತಾರೆ, ಅದು ಚೆನ್ನಾಗಿ ಬೆಳೆಯುತ್ತದೆ. ಇದು ಅರಣ್ಯ ಇಲಾಖೆಯವರ ಅಭಿಪ್ರಾಯ.

ಶ್ರೀ ಬಿ. ರಾಚಯ್ಯ.—ಈ ವಿಷಯದಲ್ಲಿ ಈ ಇಲಾಖಾ ಮುಖ್ಯಾಧಿಕಾರಿಯವರು ಇದನ್ನು dibble ಮಾಡಬೇಕೇಹೊರತು plant ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ, ಈ ಕೆಲಸವನ್ನು ತ್ವರಿತವಾಗಿ ನಡೆಸುವುದಕ್ಕೆ ಈ ಉದ್ಯೋಗದಲ್ಲಿರತಕ್ಕ ಅಧಿಕಾರಿಗಳಿಗೆ ಅವಕಾಶ ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಎಸ್ಟಿಮೇಟ್ಸ್ ಕಮಿಟಿಯವರ ಜೊತೆ ಹೋಗಿ ನಾನೇ ಖುದ್ದು ನೋಡಿ ಬಂದಿದ್ದೇನೆ. ತಾವಿದನ್ನು ವಿಚಾರಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—9,000 ಚಿಲ್ಲರೆ ಎಕರೆಗಳಲ್ಲಿ ಹಾಕಿದ್ದೇವೆಂದು ಹೇಳಿದ್ದೀರಿ. ಇವುಗಳು ವನಮಹೋತ್ಸವದಲ್ಲಿ ನೆಟ್ಟ ಗಿಡಗಳೇ?

ಡಾ॥ ಆರ್. ನಾಗನಗೌಡ.—ವನಮಹೋತ್ಸವಕ್ಕೂ ಇದಕ್ಕೂ ಸಂಬಂಧವಿಲ್ಲ. ಅರಣ್ಯ ಇಲಾಖೆಯವರು regular ಆಗಿ ನೆಟ್ಟಿರುವುದು.

ಶ್ರೀ ಕೆ. ಲಕ್ಕಪ್ಪ.—ಈ 9,000 ಎಕರೆಗಳೆಂದರೆ ಹೊಸದಾಗಿ ವರ್ಷೇ ವರ್ಷೇ ಎರಡು ಸಾವಿರ ಎಕರೆಗಳನ್ನು ಸೇರಿಸಿಕೊಂಡು ಬಂದಿರುವುದೇ?

ಡಾ॥ ಆರ್. ನಾಗನಗೌಡ.—ಇದರಲ್ಲಿ ಕೆಲವು ತೇಗದ ಪ್ಲಾಂಟೇಷನ್‌ಗಳಿವೆ. ಅವು ಹೊಸದಾಗಿ ಮಾಡಿರುವುದು. ಇನ್ನ ಕೆಲವನ್ನು fuel plantation ಗಳೆಂದು ಹೇಳಿ ಬೆಂಗಳೂರಿನ ಸುತ್ತಲೂ ಮಾಡಿದ್ದಾರೆ. ಅಷ್ಟೇ ಹೊರತು ಈಗ ಹೊಸದಾಗಿ new forestsನ್ನು ತೆಗೆದುಕೊಂಡು ಮಾಡಿಲ್ಲ. ಎಲ್ಲಿ ಫಾರೆಸ್ಟ್‌ಗಳು ಚೆನ್ನಾಗಿಲ್ಲವೋ ಅಲ್ಲಿ afforestation ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಮೈದಾನದಲ್ಲಿರತಕ್ಕ ಅರಣ್ಯ ಪ್ರದೇಶಗಳನ್ನು ಉತ್ತಮಪಡಿಸುವುದಕ್ಕೆ ನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಡಾ॥ ಆರ್. ನಾಗನಗೌಡ.—ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಾರಣವಾಗಿ 86,500 ಎಕರೆಗಳನ್ನು afforest ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಟಾಂಗ್ಯಾ ಸಿಸ್ಟಂ ಮೇರೆಗೆ ಏನಾದರೂ ಗಿಡಗಳನ್ನು ಬೆಳೆಸುತ್ತಿದ್ದೀರಾ?

ಡಾ॥ ಆರ್. ನಾಗನಗೌಡ.—ಬೆಳೆಸುತ್ತಿದ್ದಾರೆ; ಆದರೆ, ಅದು ಅಷ್ಟು ಸರಿಯಾಗಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಟಾಂಗ್ಯಾ ಸಿಸ್ಟಂ ಮೇರೆ ಎಷ್ಟು ಮಾಡಿದ್ದಾರೆ?

ಡಾ॥ ಆರ್. ನಾಗನಗೌಡ.—ಈ ವರ್ಷ ಏನೂ ಕೊಟ್ಟಿಲ್ಲ. ಹಿಂದಿನ ವರ್ಷ ಟಾಂಗ್ಯಾ ಸಿಸ್ಟಂ ಮೇರೆ ಕೊಟ್ಟಿದ್ದೆವು. ಆ ಸಿಸ್ಟಂಮೇರೆ ತೆಗೆದುಕೊಂಡಿರುವವರು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಟಾಂಗ್ಯಾ ಸಿಸ್ಟಂ ಮೇರೆ ಕೊಡಕೂಡದೆಂದು ತೆಗೆದುಹಾಕಿದ್ದೀರಾ?

ಡಾ॥ ಆರ್. ನಾಗನಗೌಡ.—ಈಗ ಆ ರೀತಿ ಕೊಟ್ಟಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಕೆಲವುಕಡೆ ಮಾತ್ರ ವೈಯಕ್ತಿಕವಾಗಿ ಕೊಟ್ಟೆವು, ಕಲವುಕಡೆ ಕೊಡಲಲ್ಲ ವೆಂದು ಹೇಳಿದ್ದೀರಿ; ಏಕೆ?

ಡಾ॥ ಆರ್. ನಾಗನಗೌಡ.—ಇತ್ತೀಚೆಗೆ ಯಾರಿಗೂ ಕೊಟ್ಟಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಇತ್ತೀಚೆಗೆ ಕೊಟ್ಟಿರುವುದನ್ನು ತರಿಸಿಕೊಂಡು ಸ್ವಲ್ಪ ಪರಿಶೀಲನೆ ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—Afforestation ಏರ್ಪಾಡಿನಲ್ಲಿ ಬಳ್ಳಾರಿ ಜಾಲಿಯನ್ನು ನೆಡಿಸುವುದನ್ನು ಯೋಚನೆ ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಅದನ್ನೂ ಧಾರಾಳವಾಗಿ ಹಾಕುತ್ತಿದ್ದೇವೆ, ಚೆನ್ನಾಗಿ ಬೆಳೆಯುತ್ತದೆ ಎಂದು.

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದಲ್ಲಿ ಯಾವಯಾವಕಡೆ ಇದನ್ನು ನೆಡೆಸಿದ್ದೀರಿ? ಬೆಂಗಳೂರು ಜಿಲ್ಲೆಯಲ್ಲಿಯೂ ಏನಾದರೂ ನೆಡೆಸುವುದಕ್ಕೆ ಏರ್ಪಾಡು ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—Beggar relief ಕಾಲೊನಿಯಲ್ಲಿ ನೆಡೆಸಿದ್ದೇವೆ. ಬೆಂಗಳೂರಿನ ಸುತ್ತ ಇರುವ ಕೆಲವು ಕಾಡುಗಳಲ್ಲಿಯೂ ಹಾಕಿದೆ. ಇಲ್ಲಿಯೂ ಚಾಮುಂಡಿ ಬೆಟ್ಟದ ಕೆಳಗೆ ಪೂರ್ವಕ್ಕೆ ಹಾಕಿರುವುದನ್ನು ನೋಡಬಹುದು, ಬೇರೆ ಗಿಡಗಳು ಯಾವುದೂ ಬೆಳೆಯುದಿರುವ ಸ್ಥಳದಲ್ಲಿ ಕೂಡ ಈ ಗಿಡ ಬೆಳೆಯುತ್ತದೆ. ದನ, ಆಡು ಯಾವುದೂ ಇದನ್ನು ಮೇಯುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಇದರಿಂದ ಸೌದೆಗೇನಾದರೂ ಉಪಯೋಗವಾಗುತ್ತದೆಯೇ?

ಡಾ॥ ಆರ್. ನಾಗನಗೌಡ.—ಬಹಳ ಉಪಯೋಗವಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈಚೆಗೆ ಸ್ವಲ್ಪ ದಿವಸಗಳ ಕೆಳಗೆ ಚಾಮುಂಡಿ ಬೆಟ್ಟದ ಹತ್ತಿರ afforestation ಮಾಡಿಸಿದರಲ್ಲ ಅದೂ ಈ ಲೆಕ್ಕದಲ್ಲಿ ಸೇರಿದೆಯೇ?

ಡಾ॥ ಆರ್ ನಾಗನಗೌಡ.—ಈ ಲೆಕ್ಕದಲ್ಲಿ ಸೇರಿಲ್ಲ. ಆದರೂ, ಹೈಸ್ಕೂಲು ಹುಡುಗರು ಅಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ತಾವೇ ಹೋಗಿ ನೋಡಬಹುದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅವರು ನೆಟ್ಟ ಸಸಿಗಳು ಒಂದೂ ಇಲ್ಲ ಅಲ್ಲವೇ?

ಡಾ॥ ಆರ್. ನಾಗನಗೌಡ.—11ನೆಯ ತಾರೀಖಿನಲ್ಲಿ ನಾನು ನೋಡಿಬಂದಿದ್ದೇನೆ. ತಾವೂ ಸಹ ನೋಡಿ ಬರಬೇಕೆಂದು ಹೇಳುತ್ತೇನೆ. ಶಾರದಾ ವಿಲಾಸ್ ಸ್ಕೂಲಿನವರು, ಬನುಮಯ್ಯ ಸ್ಕೂಲಿನವರು ಎಷ್ಟು ಚೆನ್ನಾಗಿ ಮಾಡಿದ್ದಾರೆಂಬುದನ್ನು ನೀವೇ ನೋಡಬಹುದು.

ಶ್ರೀ ವಿ. ವೆಂಕಟಪ್ಪ.—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಅಚ್ಚರ್ ಫಾರೆಸ್ಟ್ ಎಂದಿದೆಯಲ್ಲವೇ?

ಡಾ॥ ಆರ್. ನಾಗನಗೌಡ.—ಜ್ಞಾಪಕವಿಲ್ಲ.

ಶ್ರೀ ವಿ. ವೆಂಕಟಪ್ಪ.—ಬೆಂಗಳೂರು ಡಿಸ್ಟ್ರಿಕ್ಟ್ ರಾಮನಗರ ತಾಲ್ಲೂಕಿನಲ್ಲಿ ಅಚ್ಚರ್ ಫಾರೆಸ್ಟ್ ಎಂಬುದು ಇದೆಯಲ್ಲವೇ?

ಡಾ॥ ಆರ್. ನಾಗನಗೌಡ.—ತಮಗೇ ಗೊತ್ತಿರಬೇಕು. I do not remember.

ಶ್ರೀ ವಿ. ವೆಂಕಟಪ್ಪ.—ತಮಗೆ ಗೊತ್ತಿದೆಯೇ?

ಡಾ॥ ಆರ್. ನಾಗನಗೌಡ.—ನನಗೆ ಜ್ಞಾಪಕವಿಲ್ಲ, ರಾಮನಗರದಲ್ಲಿ ಎಲ್ಲಿದೆ?

ಶ್ರೀ ವಿ. ವೆಂಕಟಪ್ಪ.—ಮಟ್ಟೆದೊಡ್ಡಿಯಲ್ಲಿ ಅಚ್ಚರ್ ಫಾರೆಸ್ಟ್ ಎಂಬುದು ಇದೆ. ಆ ಫಾರೆಸ್ಟನ್ನು ರೆವಿನ್ಯೂ ಇಲಾಖೆಗೆ ಕೊಟಿದ್ದಿರೋ ಅಥವಾ ಫಾರೆಸ್ಟ್ ಇಲಾಖೆಯಲ್ಲಿಯೇ ಬಿಟ್ಟಿದ್ದೀರೋ?

ಡಾ॥ ಆರ್. ನಾಗನಗೌಡ.—ನೋಟೀಸ್ ಬೇಕು.

ಶ್ರೀ ಡಿ. ಎಂ. ಗೋವಿಂದರಾಜುಲು.—ಮೈಸೂರಿನ ಕಾಡುಗಳಲ್ಲಿ ಎರಡನೆಯ ಪಾಂಚವಾರ್ಷಿಕ ಪ್ಲಾನ್ ಪ್ರಕಾರ ಯಾವ ಮರ ಬೆಳಸಬೇಕೆಂದಿದೆ?

ಡಾ॥ ಆರ್. ನಾಗನಗೌಡ.—ಸೀಮೆ ತಂಗಡಿ, ಹೊಂಗೆ, ಜಾಲಿ, ಯೂಕಲಿಪ್ಟಸ್ ಮುಂತಾದ ನಾಲ್ಕೈದು ಜಾತಿಗಳನ್ನು.

ಶ್ರೀ ಡಿ. ಎಂ. ಗೋವಿಂದರಾಜು.—ಮಲೆನಾಡು ಪ್ರದೇಶದಲ್ಲಿ ಯಾವ ಗಿಡಗಳನ್ನು ಬೆಳಸಬೇಕೆಂದಿದೆ ?

ಡಾ॥ ಆರ್. ನಾಗನಗೌಡ.—ಸೀಮೆತಂಗಡಿ ಮತ್ತು ತೇಗ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಕೃಷ್ಣರಾಜಸಾಗರ ಪ್ಲಾಜೇಷನ್ನಿನಲ್ಲಿ, ನೆಲಮಂಗಲ ತಾಲ್ಲೂಕಿನಲ್ಲಿ ಯಾವುದನ್ನು ಬೆಳೆಸಬೇಕೆಂದಿದೆ ?

ಡಾ॥ ಆರ್. ನಾಗನಗೌಡ.—ಹೇಳಿದೆನಲ್ಲ ; ಇದನ್ನೇ ಬೆಳೆಸಬೇಕೆಂದು ಮಾಡಿದ್ದೇವೆ.

Short-term Loans Co-operative Societies in Gundlupet Taluk.

Q.—98. Sri H. K. SIVARUDRAPPA (Gundlupet—Heggadadevankote).—

Will the Government be pleased to state :—

(*a*) the co-operative societies that are permitted to issue short-term loans in Gundlupet taluk ;

(*b*) (*i*) the number of applications received for the grant of short-term loans in each co-operative society during the current year ;

(*ii*) the total amount of the same ;

(*c*) (*i*) the amount actually paid by each co-operative society now ;

(*ii*) the amount not yet paid though sanctioned ;

(*iii*) the reason for not paying till now ;

(*d*) the amount paid by each co-operative society and the dates of such payment ; when persons who have taken short-term loans have to repay the same ?

A.—Dr. R. NAGAN GOWDA (Minister for Agriculture).—

(*a*)—

1 Kasaba Circle M.P.C.S., Gundlupet.
2 Hangala Circle M.P.C.S.
3 Hundipura Circle M.P.C.S.
4 Therakanambi Circle M.P.C.S.
5 Kadasoge Circle M.P.C.S.
6 Begur Circle M.P.C.S.
7 Somahally Circle M.P.C.S.
8 Nenekatte Circle M.P.C.S.
9 Kabbahalli C.S.
10 Raghavapura C.S.
11 Kabbahalli A.K.C.S.
12 Agathagowdanahally C.S.

(*b*) (i) 850 *Vide* Annexure (i), appended.

(ii) Rs. 1,54,460.

(*c*) (i)

		Rs.
1	Kasaba Circle M.P.C.S.	34,440
2	Begur Circle M.P.C.S.	29,780
3	Hangala Circle M.P.C.S.	25,200
4	Agathagowdanahalli C.S.	3,350
5	Raghavapura C.S.	2,750
6	Nenekatte Circle M.P.C.S.	6,990
7	Kadasoge Circle M.P.C.S.	18,590
8	Somahally Circle M.P.C.S.	10,410
	Total ...	1,22,510

(ii) Rs. 21,020.

(iii) The reason is due to the delay on the part of the societies to produce the necessary bonds.

(*d*) *Vide* annexure (ii)

The borrowers have to repay the loan in February 1956.

ANNEXURE (i)

The number of applications received from each of the Co-operative Societies approved for issue of short-term credit in Gundlupet Taluk with amounts.

Sl. No.	Name of Society	No. of loan applications	Amount
			Rs.
1	Begur Circle Multi-purpose Co-operative Socitey ...	85	20,780
2	Agathagowdanahalli Co-operative Society ...	33	6,550
3	Kasaba Circle Multi-purpose Co-operative Society, Gundlupet ...	187	38,205
4	Nenekatte Circle Multi-purpose Co-operative Society...	73	10,735
5	Hangala Circle Multi-purpose Co-operative Society ...	133	25,200